# ಗುಲಬರ್ಗಾ ವಿದ್ಯುತ್ ಸರಬರಾಜು ಕಂಪನಿ ನಿಯಮಿತ

ಸಂ:ಸಕಾನಿಅ(ವಿ)/ನಉವಿ2/ರಾ/ಸಲೆಅ/2019-20/1330-35

ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು(ವಿ),
ಕಾ ಮತ್ತು ಪಾ ನಗರ ಉಪ-ವಿಭಾಗ-2 ಜೆಸ್ಕಾಂ,
ರಾಯಚೂರು.

ದಿನಾಂಕ: 26 SEP 2019

## ವಿದ್ಯುತ್ ಗ್ರಾಹಕರ ಸಂವಾದ ಸಭೆಯ ನಡಾವಳಿಗಳು

**ವಿಷಯ**: ದಿನಾಂಕ 21-09-2019 ರಂದು ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು(ವಿ) ಕಾರ್ಯ ಮತ್ತು ಪಾಲನೆ ನಗರ ಉಪವಿಭಾಗ-2 ರಲ್ಲಿ ಜರುಗಿದ ಗ್ರಾಹಕರ ಕುಂದು ಕೊರತೆಯ ಸಂವಾದ ಸಭೆಯ ನಡಾವಳಿಗಳು.

**ಸಭೆಯಲ್ಲಿ ಉಪಸ್ಥಿತರಿದ್ದ ಅಧಿಕಾರಿಗಳು**

1. ಮಾನ್ಯ ಶ್ರೀ ರಾಜೇಶ್ ವರ್ಮಾ ಪ್ರಭಾರಿ ಅಧೀಕ್ಷಕ ಅಭಿಯಂತರರು(ವಿ) ವೃತ್ತ ಕಛೇರಿ, ಗು.ವಿ.ಸ.ಕಂ.ನಿ ರಾಯಚೂರು.
2. ಮಾನ್ಯ ಶ್ರೀ ಪುರುಷೋತ್ತಮ ಕಾರ್ಯನಿರ್ವಾಹಕ ಅಭಿಯಂತರರು(ವಿ) ಕಾ ಮತ್ತು ಪಾ ನಗರ ವಿಭಾಗ ಗು.ವಿ.ಸ.ಕಂ.ನಿ ರಾಯಚೂರು.
3. ಶ್ರೀ ಸಂತೋಷ ಕುಮಾರ ಜೆ.ಟಿ. ಪ್ರಭಾರಿ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು(ವಿ) ಕಾ ಮತ್ತು ಪಾ ನಗರ ಉಪವಿಭಾಗ-2 ಗು.ವಿ.ಸ.ಕಂ.ನಿ ರಾಯಚೂರು.
4. ಶ್ರೀ ಮಲ್ಲಿಕಾರ್ಜುನ ಗೌಡ ಸಹಾಯಕ ಲೆಕ್ಕಾಧಿಕಾರಿಗಳು ಕಾ ಮತ್ತು ಪಾ ನಗರ ಉಪವಿಭಾಗ-2 ಗು.ವಿ.ಸ.ಕಂ.ನಿ ರಾಯಚೂರು.

*****

ಪ್ರಥಮವಾಗಿ ಶ್ರೀ ಮಲ್ಲಿಕಾರ್ಜುನ ಗೌಡ ಸಹಾಯಕ ಲೆಕ್ಕಾಧಿಕಾರಿಗಳು ಕಾ ಮತ್ತು ಪಾ ನಗರ ಉಪವಿಭಾಗ-2 ಗು.ವಿ.ಸ.ಕಂ.ನಿ ರಾಯಚೂರು ರವರು ಸಭೆಯಲ್ಲಿ ಉಪಸ್ಥಿತರಿದ್ದ ಅಧಿಕಾರಿಗಳನ್ನು ಹಾಗೂ ಗ್ರಾಹಕರನ್ನು ಸ್ವಾಗತಿಸಿ ಸಭೆಗಳ ಬಗ್ಗೆ ಮತ್ತು ಇನ್ನಿತರ ವಿಷಯಗಳ ಬಗ್ಗೆ ಚರ್ಚಿಸಲು ತಿಳಿಸಿದರು.

**ಮೊದಲನೇಯದಾಗಿ**: ಮೆ॥ ಮಹಾವೀರ್ ಇಂಡಸ್ಟ್ರೀಸ್ ಶ್ರೀ ಮನೀಷ್ ನಹತ ಪ್ಲಾಟ್ ನಂ. 46,47 ಮತ್ತು 48 ರಾಯಚೂರು ಗ್ರಾಹಕರ ಹೆಚ್.ಟಿ. ಸ್ಥಾವರ ಸಂಖ್ಯೆ **5856084443** ಗೆ ಋತುಕಾಲಿಕ ಅವಧಿಯಲ್ಲಿ ರಿಯಾಯಿತಿಯನ್ನು ನೀಡಲು ಅಧಿಕೃತ ಜ್ಞಾಪನ ನೀಡಿದ್ದು ಸದರಿ ಸ್ಥಾವರಕ್ಕೆ ನೀಡಿರುವ ಕಳೆದ ಮೂರು ತಿಂಗಳು ಜೂನ್-2019, ಜುಲೈ-2019 ಮತ್ತು ಅಗಸ್ಟ್-2019 ರ ರಿಯಾಯಿತಿಯನ್ನು ಹಿಂಪಡೆಯಲು ಸೂಚಿಸಿದ್ದಾರೆ. ಅದ್ದರಿಂದ ಈ ರಿಯಾಯಿತಿಯನ್ನು ನೀಡಲು ಕೋರಿದರು.

ಸದರಿ ಗ್ರಾಹಕರ ಹೆಚ್.ಟಿ. ಸ್ಥಾವರ ಸಂಖ್ಯೆ **5856084443** ಗೆ **KERC** ಪ್ರಕಾರ ಋತುಕಾಲಿಕ ರಿಯಾಯಿತಿಗೆ ಅರ್ಹ ಇರುವುದಿಲ್ಲವೆಂದು ಗ್ರಾಹಕರಿಗೆ ಮನವರಿಕೆ ಮಾಡಿಕೊಡಲಾಯಿತು.

**ಎರಡನೇಯದಾಗಿ**: ಮೆ॥ ಹನುಮಾನ್ ಕಾಟನ್ ಜಿನ್ನರ್ ಯುನಿಟ್-2 ಮಂಚಲಾಪೂರ ರಸ್ತೆ ರಾಯಚೂರು ಗ್ರಾಹಕರ ತಮ್ಮ ಹೆಚ್.ಟಿ. ಸ್ಥಾವರಕ್ಕೆ **25KVA CD** ಭಾರ ಹೊಂದಿದ್ದು ಸದರಿ ಸ್ಥಾವರಕ್ಕೆ ಹೆಚ್ಚಿನ **335 KVA** ಭಾರವನ್ನು ಕೋರಿ ಅರ್ಜಿಯನ್ನು ಸಲ್ಲಿಸಿದ್ದಾರೆ. ಸದರಿ ಮಂಜೂರಾತಿ ಪ್ರತಿಯಲ್ಲಿ (ಇನ್ಫೊಸಿಸ್ ತಂತ್ರಾಂಶ) **335 KVA** ಗೆ ಠೇವಣಿ ಮೊತ್ತ ಅಧಿಕವಾಗಿದ್ದು, ಆದರೆ ಗ್ರಾಹಕರು ಈಗಾಗಲೇ ಹೆಚ್ಚಿನ ಠೇವಣಿ ಮೊತ್ತವನ್ನು ಪಾವತಿಸಿದ್ದು, ಮಂಜೂರಾತಿ ಪ್ರತಿಯಲ್ಲಿ ಹೊಂದಾಣಿಕೆ ಮಾಡಿ ಬಾಕಿ ಠೇವಣಿ ಮೊತ್ತ ಭರಿಸಲು ಅನುಕೂಲ ಮಾಡುವಂತೆ ಕೋರಿದರು.

ಸದರಿ ಗ್ರಾಹಕರ ದೂರಿಗೆ ಟಿಕೇಟ್ ನಂ: **SD-564465** ಮುಖಾಂತರ ಸದರಿ ಗ್ರಾಹಕರ ಮನವಿಯನ್ನು ಸ್ವೀಕರಿಸಿ ಇನ್ಫೊಸೀಸ್ ತಂತ್ರಾಂಶದಲ್ಲಿ ಸರಿಪಡಿಸಲಾಯಿತು.

**ಪು.ತಿ.ನೋ**

Scanned by CamScanner

**ಮೂರನೇಯದಾಗಿ**: ಶ್ರೀ ಮೋಹನ್ ವಿದ್ಯುತ್ ಗುತ್ತೆದಾರರು ರಾಯಚೂರು ಗ್ರಾಹಕರು ತಮ್ಮ ಹೆಚ್.ಟಿ. ಸ್ಥಾವರದ ಭದ್ರತಾ ಠೇವಣಿ ಹಿಂಪಡಿಯಲು ಸಲ್ಲಿಸಿದ ಅರ್ಜಿಯು ಬಹಳ ದಿನಗಳಿಂದ ವಿಳಂಬವಾಗುತ್ತಿದೆ ಎಂದು ದೂರಿದರು. (HTR-100,HTR-135&HTR-169)

ಸದರಿ ಗ್ರಾಹಕರ ಭದ್ರತಾ ಠೇವಣಿಯು ರೂ. 1,00000/- ಕಿಂತ ಹೆಚ್ಚು ಇರುವುದರಿಂದ ಮಾನ್ಯ ಆರ್ಥಿಕ ಸಲಹೆಗಾರರ ಅನುಮೂದನೆ ಬೇಕಾಗಿರುವುದರಿಂದ ದಿನಾಂಕ 23-09-2019 ರಂದು ಮಾನ್ಯ ಆರ್ಥಿಕ ಸಲಹೆಗಾರರು (ಆಂ.ಪ) ನಿಗಮ ಕಾರ್ಯಾಲಯ ಕಲಬುರಗಿಯವರು ಅನುಮೂದನೆ ನೀಡಿರುತ್ತಾರೆ.

**ನಾಲ್ಕನೇಯದಾಗಿ**: ಶ್ರೀ ಮಹೆಬೂಬ್ ಯರಮರಸ್ ರಾಯಚೂರು ಗ್ರಾಹಕರು ತಮ್ಮ ಸ್ಥಾವರ ಸಂಖ್ಯೆ 0290251205 ವಿದ್ಯುತ್ ಸಂಪರ್ಕ ಪಡೆದು, ಸದರಿ ಗ್ರಾಹಕರ ಪ್ಲಾಟಿನಲ್ಲಿ ವಿದ್ಯುತ್ ಮಾರ್ಗ ಹಾದು ಹೋಗಿದೆ. ಸದರಿ ಮಾರ್ಗವನ್ನು ಬದಲಾಯಿಸಿ ಕೊಡಲು ವಿಳಂಬವಾಗುತ್ತಿದೆ ಎಂದು ದೂರಿದರು.

ಸದರಿ ಗ್ರಾಹಕರ ದೂರನ್ನು ಶೀಘ್ರವಾಗಿ ಪರಿಹರಿಸಲು ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು(ವಿ) ನಗರ ಉಪವಿಭಾಗ-1 ರವರಿಗೆ ಸೂಚಿಸಲಾಯಿತು.

**ಐದನೇಯದಾಗಿ**: ಶ್ರೀ ಮಹೆಬೂಬ್ ನಿವೃತ್ತ ಇಂಜಿನಿಯರ್ ಯರಮರಸ್ ಕ್ಯಾಂಪ್ ರಾಯಚೂರು ಗ್ರಾಹಕರು ತಮ್ಮ ಆರ್.ಆರ್. ಸಂಖ್ಯೆ 40336 ಗೆ ಪ್ರತಿ ತಿಂಗಳು ವಿದ್ಯುತ್ ಬಿಲ್‌ನ್ನು ಪಾವತಿಸುತ್ತಿಲ್ಲ. ಅದ್ದರಿಂದ ಸದರಿ ಸ್ಥಾವರಕ್ಕೆ ವಿದ್ಯುತ್ ಬಿಲ್‌ನ್ನು ಪಾವತಿಸಲು ಕೋರಿದರು.

ಸದರಿ ಗ್ರಾಹಕರ ದೂರನ್ನು ಶೀಘ್ರವಾಗಿ ಪರಿಹರಿಸಲು ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು(ವಿ) ನಗರ ಉಪವಿಭಾಗ-1 ರವರಿಗೆ ಸೂಚಿಸಲಾಯಿತು.

ಕೊನೆಯದಾಗಿ ಎಲ್ಲರಿಗೂ ವಂದಿಸಿ ಈ ಸಭೆಯನ್ನು ಮುಕ್ತಾಯ ಗೊಳಿಸಲಾಯಿತು.

ತಮ್ಮ ವಿಶ್ವಾಸಿ

ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು(ವಿ),
ಕಾ ಮತ್ತು ಪಾ ನಗರ ಉಪ-ವಿಭಾಗ-2
ಜೆಸ್ಕಾಂ, ರಾಯಚೂರು.

**ಪ್ರತಿಗಳು**:

1. ಮಾನ್ಯ ಮುಖ್ಯ ಅಭೀಯಂತರರು(ವಿ) ಬಳ್ಳಾರಿ ವಲಯ ಜೆಸ್ಕಾಂ, ಬಳ್ಳಾರಿ. ರವರ ದಯಾಪರ ಮಾಹಿತಿಗಾಗಿ ಸಲ್ಲಿಸಲಾಗಿದೆ
2. ಮಾನ್ಯ ಅಧೀಕ್ಷಕ ಅಭಿಯಪಂತರರು ವೃತ್ತ ಕಛೇರಿ ಜೆಸ್ಕಾಂ ರಾಯಚೂರು ರವರ ದಯಾಪರ ಮಾಹಿತಿಗಾಗಿ ಸಲ್ಲಿಸಲಾಗಿದೆ
3. ಮಾನ್ಯ ಕಾರ್ಯನಿರ್ವಾಹಕ ಅಭೀಯಂತರರು(ವಿ) ಕಾ ಮತ್ತು ಪಾ ನಗರ ವಿಭಾಗ ಜೆಸ್ಕಾಂ, ರಾಯಚೂರು. ರವರ ದಯಾಪರ ಮಾಹಿತಿಗಾಗಿ ಸಲ್ಲಿಸಲಾಗಿದೆ
4. ಎಲ್ಲಾ ಶಾಖಾಧಿಕಾರಿಗಳು ಕಾರ್ಯ ಮತ್ತು ಪಾಲನೆ ನಗರ ಉಪವಿಭಾಗ-2 ಜೆಸ್ಕಾಂ ರಾಯಚೂರು ರವರ ಮಾಹಿತಿಗಾಗಿ ಹಾಗೂ ಮುಂದಿನ ಸೂಕ್ತ ಕ್ರಮಕ್ಕಾಗಿ.
5. ಸಲೆಅ-2/ಮು.ಕ

Scanned by CamScanner